ಸಿಂಧನೂರಿನಲ್ಲಿ ಹೊರವರ್ತುಲ ರಸ್ತೆ ನಿರ್ಮಿಸುವುದು

532 (364) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆಯ ಸಿಂಧನೂರು ಪಟ್ಟಣದಲ್ಲಿ ಅತೀ ಹೆಚ್ಚಿನ ವಾಹನ ದಟ್ಟಣೆಯಿಂದ ಸ್ಥಳೀಯ ನಾಗರೀಕರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ತೊಂದರೆಯನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಸಿಂಧನೂರಿನಲ್ಲಿ ಹೊರ ವರ್ತುಲ ರಸ್ತೆಯನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಈ) ಹಾಗಿದ್ದಲ್ಲಿ, ಹೊರ ವರ್ತುಲ ರಸ್ತೆಯ ನಿರ್ಮಾಣಕ್ಕೆ ಸರ್ಕಾರ ಭೂಸ್ವಾಧೀನಪಡಿಸಿಕೊಂಡಿದೆಯೇ;

ಉ) ಹಾಗಿದ್ದಲ್ಲಿ, ಎಷ್ಟು ಎಕರೆ ಭೂಮಿಯನ್ನು ಸ್ವಾಧೀನಪಡಿಸಿ ಕೊಳ್ಳಲಾಗಿದೆ;

ಊ) ಈ ಭೂಮಿಗೆ ಸರ್ಕಾರ ಎಕರೆಯೊಂದಕ್ಕೆ ನಿಗದಿಪಡಿಸಿರುವ ಮೊತ್ತ ಎಷ್ಟು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿರುತ್ತದೆ.

ಆ) ಈ ಬಗ್ಗೆ ತೊಂದರೆಯನ್ನು ನಿವಾರಿಸಲು ಸಿಂಧನೂರು ಪಟ್ಟಣದಲ್ಲಿ ಕಲ್ಮಲಾ ಶಿಗ್ಗಾಂವ ರಾಹೆ–23, ಸಿಂಧನೂರು ಹೆಮ್ಮಡಗಾ ರಾಹೆ–30 ಮತ್ತು ಶ್ರೀರಂಗಪಟ್ಟಣ–ಜೇವರ್ಗಿ ರಾಹೆ–19 ಈ 3 ರಾಜ್ಯ ಹೆದ್ದಾರಿಗಳು ಹಾಯ್ದು ಹೋಗುತ್ತಿರುವ ಪೈಕಿ 1) ಕಲ್ಮಲಾ ಶಿಗ್ಗಾಂವ ರಾಹೆ–23 ಮತ್ತು ಶ್ರೀರಂಗಪಟ್ಟಣ–ಜೀವರ್ಗಿ ರಾಹೆ–19 ಕೆಶಿಪ್ ವತಿಯಿಂದ ಅಭಿವೃದ್ಧಿಪಡಿಸಲಾಗಿರುತ್ತದೆ. ಕಲ್ಮಲಾ ಶಿಗ್ಗಾಂವ ರಾಹೆ–23 ರಸ್ತೆಯನ್ನು ದ್ವಿಪಥ ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗಿರುತ್ತದೆ ಮತ್ತು ಸಿಂಧನೂರು ಹೆಮ್ಮಡಗಾ ರಾಹೆ–30 ರಸ್ತೆಯನ್ನು ಪಟ್ಟಣ ಪರಿಮಿತಿಯಲ್ಲಿ ಅಗಲೀಕರಣಗೊಳಿಸಲಾಗಿರುತ್ತದೆ.

ಇ) ಇಲ್ಲ.

ಈ) ಇಲ್ಲ.
ಉ) ಉದ್ಭವಿಸುವುದಿಲ್ಲ.
ಊ) ಉದ್ಭವಿಸುವುದಿಲ್ಲ.

ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿ

533 (988) ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆಯ ಇಂಜಿನಿಯರ್‌ಗಳ ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿಗೆ ಕೆ.ಎ.ಟಿ. ಮತ್ತು ಮಾನ್ಯ ಉಚ್ಚ ನ್ಯಾಯಾಲಯದಿಂದ ನಿರ್ದೇಶನಗಳಿದ್ದರೂ ಸಹ ಸರ್ಕಾರ ಇಂಜಿನಿಯರ್‌ಗಳ ಬ್ಯಾಕ್‌ಲಾಗ್ ಹುದ್ದೆಗಳಿಗೆ ಗುತ್ತಿಗೆ ನೌಕರರನ್ನೇ ಖಾಯಂ ಮಾಡಲು ರಚಿಸಲಾದ 2005ರ ವಿಶೇಷ ನಿಯಮಾವಳಿಯನ್ನು ಅನುಷ್ಠಾನಗೊಳಿಸುವ ಮೊದಲು ನ್ಯಾಯಾಲಯಗಳ ಅನುಮತಿ ಪಡೆಯಲಾಗದೆ ಇರುವುದಕ್ಕೆ ಕಾರಣವೇನು;

ಆ) ದಿನಾಂಕ: 7–4–2005ರ ಸಚಿವ ಸಂಪುಟದ ನಿರ್ಣಯದಲ್ಲೂ ಸಹ ಕೆಎಟಿಯ ಅನುಮತಿ ಪಡೆಯುವಂತೆ ಸೂಚಿಸಿದ್ದರೂ ಅನುಮತಿ ಪಡೆಯದೆ 2005ರ ವಿಶೇಷ ನಿಯಮಾವಳಿಗಳನ್ನು ಅನುಷ್ಠಾನಗೊಳಿಸಿರುವ ಹಿನ್ನೆಲೆಯಲ್ಲಿ ಕಾರ್ಯಾಂಗದಿಂದ ಸಚಿವ ಸಂಪುಟದ ನಿರ್ಣಯವನ್ನು ಉಲ್ಲಂಘಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಮೇಲ್ಕಂಡ ವಿಷಯಗಳ ಹಿನ್ನೆಲೆಯಲ್ಲಿ ದಿನಾಂಕ: 25–5–2009 ರಂದು ಕೆಎಟಿಯು 2005ರ ವಿಶೇಷ ನಿಯಮಾವಳಿಯನ್ನು ರದ್ದುಪಡಿಸಿರುವು ದರಿಂದ 1278, ಎಸ್‌ಸಿ/ಎಸ್‌ಟಿ ಇಂಜಿನಿಯರ್‌ಗಳ ಉದ್ಯೋಗ ಭದ್ರತೆಗೆ ಸರ್ಕಾರದ ಮುಂದಿನ ಕ್ರಮ ಏನು;

ಈ) ಹೆಚ್ಚು ಅಂಕಗಳು ಹಾಗೂ ಅರ್ಹತೆ ಇದ್ದು, ನ್ಯಾಯಾಲಯ ದಿಂದಲೂ ಸಹ ತೀರ್ಪು ಪಡೆದಿರುವಂತಹ, ವಯೋಮಿತಿ ಮೀರುತ್ತಿರುವ ಅರ್ಹ ಎಸ್‌ಸಿ/ಎಸ್‌ಟಿ ನಿರುದ್ಯೋಗಿ ಇಂಜಿನಿಯರ್‌ಗಳ ಭವಿಷ್ಯದ ಕುರಿತಾಗಿ ಸರ್ಕಾರ ತೆಗೆದುಕೊಂಡ ಕ್ರಮ ಏನು;